**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ . 447 / 2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಡಾಕ್ಟರ್ ಸುಷ್ಮಾ | **ಚಾ.ಸಾ.-8** |
| **ಗಂಡನ ಹೆಸರು** | - | ಡಾಕ್ಟರ್ ಎಸ್ ವಿ ನಾರಯಾಣಸ್ವಾಮಿ | **ಫ್ರಾ.ಸಾ.-5** |
| **ವಯಸ್ಸು** | - | 50 ವರ್ಷ | |
| **ಉದ್ಯೋಗ** | - | ನೇತ್ರಾತಜ್ಞರು | |
| **ವಾಸಸ್ಥಳಃ** | - | ಚನ್ನಪಟ್ಟಣ | |

ದಿನಾಂಕಃ 23-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ನಾನು ಆಗಸ್ಟ್-2009 ರಿಂದ ಜನವರಿ -2019 ವರೆಗೆ ಮದ್ದೂರು ಆಸ್ಪತ್ರೆಯಲ್ಲಿ ನೇತ್ರತಜ್ಞರಾಗಿ ಕೆಲಸ ನಿರ್ವಹಿಸಿರುತ್ತೇನೆ.

ದಿನಾಂಕಃ01-05-2016 ರಂದು ಸಂಜೆ 06-20 ಗಂಟೆ ಸಮಯದಲ್ಲಿ ಚಾ.ಸಾ. 2 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿರುತ್ತಾರೆ. ನಾನು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ನಾಲಿಗೆ ಮೇಲೆ 3*1 ಸೆಂ ಮೀ ಅಗಲದ ಹರಿದ ಗಾಯ
2. ಎದೆ ಎಡಭಾಗದಲ್ಲಿ ಮುಟ್ಟಿದರೆ ನೋವಿರುತ್ತದೆ

ಸದರಿ ಗಾಯಗಳು ತಾಜಾ ಗಾಯಗಳು. 1 ನೇ ಗಾಯವೂ ತೀವ್ರ ಸ್ವರೂಪ, 2 ನೇ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ನಾನು ಈ ಕುರಿತು ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರೀ ಗಾಯದ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ,ಪಿ. 3 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 3 (ಬಿ) ಎಂದು ಗುರುತಿಸಲಾಯಿತು.

ಅದೇ ದಿನ ರಾತ್ರಿ 10-45 ಗಂಟೆ ಸಮಯದಲ್ಲಿ ಚಾ.ಸಾ. 1 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿರುತ್ತಾರೆ. ನಾನು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಬೆನ್ನಿನ ಮೇಲ್ಭಾಗ ಹಾಗೂ ಎಡಭಾಗದಲ್ಲಿ ಮುಟ್ಟಿದರೆ ನೋವು ಇರುತ್ತದೆ

ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ನಾನು ಈ ಕುರಿತು ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರೀ ಗಾಯದ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ,ಪಿ. 4 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 4 (ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರುಃ ಶ್ರೀ ಕೆ ವಿ ಆರ್ ರವರಿಂದ**

ಚಾಸಾ-1 ಮತ್ತು 2 ರವರು ಬೇರೆ ಬೇರೆಯಾಗಿ ಬಂದು ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ. ನಿಪಿ-3 ಮತ್ತು 4 ಗಾಯದ ಪ್ರಮಾಣಪತ್ರಗಳಲ್ಲಿ ಚಾಸಾ-1 ಮತ್ತು 2 ರವರಿಗೆ ಯಾರು ಹಲ್ಲೆ ಮಾಡಿರುತ್ತಾರೆಂಬುದನ್ನು ನಮೂದಿಸಿರುವುದಿಲ್ಲ. ಸಾಮಾನ್ಯವಾಗಿ ಯಾವುದೇ ವ್ಯಕ್ತಿ ದ್ವಿ ಚಕ್ರ ವಾಹನದಲ್ಲಿ ಹೋಗುವಾಗ ಆಯಾತಪ್ಪಿ ಗಟ್ಟಿಯಾದ ಸ್ಥಳದಲ್ಲಿ ಬಿದ್ದಂತಹ ಸಮಯದಲ್ಲಿ ನಿಪಿ-3 ಮತ್ತು 4 ರಲ್ಲಿ ನಮೂದಾಗಿರುವ ಗಾಯಗಳಾಗುವ ಸಾಧ್ಯತೆಗಳು ಇದೆ ಎಂದರೆ ಸರಿ. ಚಾಸಾ-1 ಮತ್ತು 2 ರವರ ಕೋರಿಕೆಯ ಮೇರೆಗೆ ನಿಪಿ-3 ಮತ್ತು 4 ರಂತೆ ಸುಳ್ಳು ಗಾಯದ ಪ್ರಮಾಣಪತ್ರಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.